
ನಗಾರಿ ಗಾಡಿಗಳಿಲ್ಲ; ಆಗಿನ ಅಕ್ಕಡಿಕಾಳಿಲ್ಲ, ಜೋಳ, ಅಕ್ಕಿ, ಬೆಣ್ಣೆ ಇತ್ಯಾದಿ ಇಲ್ಲ. ವಸ್ತು ಕೃತ್ರಿಮವಾಗಿದೆ, ವಾಸ್ತವ ನಂಬಿಕೆಗೆ ಅತೀತವಾಗಿದೆ. ಈಗ ಇಡೀ ಊರು ಪೇಟೆಯಾಗಿದೆ, ಸಂತೆಯಾಗಿದೆ; ಮನೆಗಳು, ಸಂಸ್ಥೆಗಳು ಸಹ ವ್ಯಾಪಾರ ಕೇಂದ್ರಗಳಾಗಿವೆ. ವ್ಯಕ್ತಿ ಮಾರಾಟವಾಗುತ್ತಿದ್ದಾನೆ, ಮಾರಾಟಗಾರನಾಗಿದ್ದಾನೆ. ಊರಿನ ಚಿತ್ರ, ಪರಿಸ್ಥಿತಿ ಬದಲಾಗಿದೆ. ಕೆರೆಗಳು ಮಾಯವಾಗಿವೆ, ಸಾಮಾನ್ಯರಂತಿದ್ದವರು ಪ್ರತಿಷ್ಠಿತರಾಗಿದ್ದಾರೆ ವಿಶಿಷ್ಟರಾಗಿದ್ದಾರೆ ವಿಭಜಿತರಾಗಿದ್ದಾರೆ. ಜಾತಿಗಳು, ಅಸೂಯೆಗಳು ಚುನಾವಣೆ, ಕೂಗಾಟ, ಹೋರಾಟ, ಸರಕಾರಿ ಸಹಾಯಧನದ ಕಡೆಗೆ ಹೊರಳಿವೆ. ಆಗ ಅಶಾಂತಿಯಲ್ಲಿಯೂ ಶಾಂತಿಯಿತ್ತು, ಸಹಕಾರವಿತ್ತು, ಅನೇಕತೆಗಳನ್ನು ಹೆಣೆದು ಸಿಂಗರಿಸುವ ಏಕತೆಯಿತ್ತು. ಸಾಮಾನ್ಯರಲ್ಲಿ, ಬಡವರಲ್ಲಿ ಅನ್ಯೋನ್ಯತೆಯಿತ್ತು, ಸಮಾನತೆಯಿತ್ತು, ವಿಶ್ವಾಸವಿತ್ತು. ವ್ಯಾಪಾರಿಗಳಲ್ಲಿ ಇದ್ದಂತೆ ಸಾಹಿತಿಗಳಲ್ಲಿಯೂ ಪೈಪೋಟಿಯಿತ್ತು; ಆದರೆ ಎಲ್ಲವೂ ಕೆಲವರಲ್ಲಿ ಮಾತ್ರ. ಕರ್ನಾಟಕ ಕಾಲೇಜು ಇಡೀ ಭಾರತಕ್ಕೆ ಧಾರವಾಡವನ್ನು ಬಿಂಬಿಸುವ ಕೇಂದ್ರವಾಗಿತ್ತು. ಅಲ್ಲಿ ವಿ.ಕೃ. ಗೋಕಾಕ, ವಿ.ಎಂ. ಇನಾಮದಾರ, ಡಬ್ಲ್ಯೂ.ಡಬ್ಲ್ಯೂ.ಎಸ್. ಭಾಸ್ಕರ್, ಸ.ಸ. ಮಾಳವಾಡ, ಎಸ್.ಆರ್. ಮಳಗಿ, ಆರ್ಮಾಂದೊ ಮೆನೆಝಿಸ್ ಅವರಂಥ ಸಾಹಿತಿಗಳು, ಹೆಸರಾಂತ ವಿದ್ವಾಂಸರು, ಶಿಕ್ಷಕರು ನನಗೆ ಕಲಿಸಿದ್ದರು. ಈಗ ಅಂಥ ಶಿಕ್ಷಣಪ್ರೇಮಿ, ವಿದ್ಯಾರ್ಥಿಹಿತೈಷಿ, ಸಾಹಿತ್ಯಶಿಖರಗಳನ್ನು ಕಲ್ಪಿಸುವುದು ಕೂಡ ಸಾಧ್ಯವಿಲ್ಲ ಎನ್ನುವಂಥ ಕಲುಷಿತ ಸಾಮಾಜಿಕ, ರಾಜಕೀಯ ವಾತಾವರಣವಿದೆ. ಇದು ದುರದೃಷ್ಟ.

ನಾನು ಕುತೂಹಲ, ಮುಗ್ಧತೆ, ಸಹಜತೆಗಳೊಂದಿಗೆ ಅಂದಿನ ಧಾರವಾಡವನ್ನು ನೋಡಿದ್ದು, ಕಂಡಿದ್ದು, ತುಂಬಿಕೊಂಡಿದ್ದು ಅನುಭವಿಸಿದ್ದು, ಕಣ್ಣಲ್ಲಿ ಚಿತ್ರವತ್ತಾಗಿ ನೆನಪಿಟ್ಟುಕೊಂಡಿದ್ದು ನನ್ನ ಭಾಗ್ಯ. ಈಗಿನ ಅನೇಕರಿಗೆ ಅದು ಇಲ್ಲ ಎಂಬ ನೋವು, ಕಳಕಳಿ. ಆದರೆ ತುಲನೆ ಎರಡು ಚಿತ್ರಗಳಿದ್ದಾಗ ಮಾತ್ರ ಸಾಧ್ಯ. ಅತ್ಯಂತ ಅವಸರದಿಂದ ಗಡಿಬಿಡಿಯಲ್ಲಿ ಈಗಿನದನ್ನು ಮಾತ್ರ ನೋಡುವವರಿಗೆ ಅವರ ದೃಷ್ಟಿಯೇ ಸರ್ವಸ್ವ, ಅಷ್ಟೆ.

ಸ್ವಲ್ಪ ಹೆಚ್ಚು ಮಾತಾಡಿದೆ. ಧಾರವಾಡದ ಮೋಹ ಎಳೆದುಬಿಟ್ಟಿತು.



◆ **ರಂಗಭೂಮಿಯ ಸಾಹಚರ್ಯದ ಮರೆಯಲಾಗದ್ದೇನಾದರೂ...**

ರಂಗಭೂಮಿಯ ಅಭಿನಯ ಮತ್ತು ಜೀವನರಂಗದ ಅನುನಯಗಳು ನನಗೆ ಒಂದು ಮಹತ್ತರ ಕೊಡುಗೆ ನೀಡಿವೆ. ಅದು ಹೇಮಾ ಎಂಬ ಸಹಚರಿಯ ರೂಪದಲ್ಲಿ ನನಗೆ ಸಂದಿದೆ. ಜೀವನ ರಂಗದಲ್ಲಿ ಮರೆಯಲಾಗದ, ಮರೆಯಬಾರದ ಇದಕ್ಕಿಂತ ಭಿನ್ನ ಸಾಹಚರ್ಯ ಏನಿರಲು ಸಾಧ್ಯ?